**ಅ.ದಾವಾ. 211/2021** **ಪಿ.ಡಬ್ಲ್ಯೂ- 1**

**ದಿನಾಂಕಃ 17/02/2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.**

**ಪಾಟೀಸವಾಲುಃ- ಪ್ರತಿವಾದಿಗಳ ಪರ ವಕೀಲರಾದ ಶ್ರೀ ಜಿ.ಎಲ್.ಎಸ್. ವಕೀಲರಿಂದ.**

ಪ್ರತಿವಾದಿಗಳು ನಮ್ಮ ಗ್ರಾಮದವರು ಎಂದರೆ ಸರಿ. ಸರ್ವೆ ನಂಬರ್ 73ರ ಸ್ವತ್ತಿಗೆ ನಾನು ಈ ದಾವೆಯನ್ನು ಹಾಕಿರುತ್ತೇನೆ. ಸರ್ವೆ ನಂಬರ್ 73 ರಲ್ಲಿ ಒಟ್ಟು ಎಷ್ಟು ಎಕರೆ ಜಮೀನು ಇರುತ್ತದೆ ಎಂದು ನನಗೆ ಹೇಳಲು ಆಗುವುದಿಲ್ಲ. ಸಾವಿತ್ರಮ್ಮ ಕೋಂ ಗಣೇಶ್ ರವರಿಗೆ 1983 ರಲ್ಲಿ ಜಮೀನು ಮಂಜೂರು ಆಗಿರುತ್ತದೆ. 1983 ರಲ್ಲಿ ಮಂಜೂರಾದ ಜಮೀನಿಗೆ ಸಾವಿತ್ರಮ್ಮರವರು ದುರಸ್ತು ಮಾಡಿಸಿಲ್ಲ. ಸಾವಿತ್ರಮ್ಮರವರು ಜಮೀನನ್ನು ದುರಸ್ತು ಮಾಡಿಸದೇ ಇರುವುದರಿಂದ ಅವರು ಯಾವ ಚೆಕ್ಕಬಂದಿಯ ಜಮೀನಿನಲ್ಲಿ ಇದ್ದರು ಎಂದು ಹೇಳಲಾಗುತ್ತದೆಯೇ ಎಂದರೆ ಸಾಕ್ಷಿಯು ಅದು ಯಾವುದನ್ನು ನಮಗೆ ಹೇಳಿಲ್ಲ ಎಂದು ನುಡಿಯುತ್ತಾರೆ. ಸಾವಿತ್ರಮ್ಮರವರಿಂದ ಜಮೀನನ್ನು ಬರೆಯಿಸಿಕೊಳ್ಳುವ ಸಮಯದಲ್ಲಿ ಸದರಿ ಜಮೀನಿನ ಸರ್ವೆ ನಂಬರ್ ಹಾಗೂ ವಿಸ್ತೀರ್ಣಕ್ಕೆ ಸಂಬಂಧಿಸಿದ ದಾಖಲೆಗಳನ್ನು ಪಡೆದುಕೊಂಡಿಲ್ಲ. ನಾನು 1990 ರಲ್ಲಿ ಸ್ವತ್ತನ್ನು ಕ್ರಯಕ್ಕೆ ಪಡೆದುಕೊಂಡಿರುತ್ತೇನೆ. ಕ್ರಯಕ್ಕೆ ಪಡೆಯುವ ಸಮಯದಲ್ಲಿ ಸಾವಿತ್ರಮ್ಮರವರಿಗೆ ಯಾವಾಗ ಖಾತೆ ಆಯಿತು ಎಂಬ ವಿಚಾರವನ್ನು ಕ್ರಯಪತ್ರದಲ್ಲಿ ನಮೂದು ಮಾಡಿರುತ್ತಾರೆ. ಸಾವಿತ್ರಮ್ಮರವರಿಗೆ ಯಾವಾಗ ಖಾತೆ ಆಗಿರುತ್ತದೆ ಎಂದರೆ ಸಾಕ್ಷಿಯು 1988 ರಲ್ಲಿ ಖಾತೆ ಆಗಿರುತ್ತದೆ ಎಂದು ಹೇಳಿರುತ್ತಾರೆ ಎಂದು ನುಡಿಯುತ್ತಾರೆ. ನಾನು ಕ್ರಯಕ್ಕೆ ಪಡೆಯುವ ಸಮಯದಲ್ಲಿ ಸಾವಿತ್ರಮ್ಮ ಅನುಭೋಗದಲ್ಲಿ ಇದ್ದರು ಎಂದು ಜಮೀನು ಹಿಡುವಳಿಪತ್ರವನ್ನು ಪಡೆದುಕೊಂಡಿರುತ್ತೇನೆ. ಸದರಿ ಹಿಡುವಳಿ ಪತ್ರವನ್ನು ಯಾರು ಯಾವಾಗ ನೀಡಿರುತ್ತಾರೆ ಎಂದು ನನಗೆ ಹೇಳಲು ಆಗುವುದಿಲ್ಲ.

ಸಾವಿತ್ರಮ್ಮನವರು ಸರ್ವೆ ನಂಬರ್ 73ರ ಸ್ವತ್ತನ್ನು ದುರಸ್ತು ಮಾಡಿಸಿರುತ್ತಾರೆ ಎನ್ನುವುದಕ್ಕೆ ಸಂಬಂಧಪಟ್ಟ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ಸದರಿ ದುರಸ್ತು ಆದ ದಾಖಲೆಯ ದಿನಾಂಕವನ್ನು ನನಗೆ ಹೇಳಲು ಆಗುವುದಿಲ್ಲ. ನಾನು ಸರ್ವೆ ನಂಬರ್ 73 ಸ್ವತ್ತನ್ನು ಕ್ರಯಕ್ಕೆ ಪಡೆದುಕೊಂಡಿರುತ್ತೇನೆ ಎನ್ನಲಾದ ನಂತರ ಅದನ್ನು ದುರಸ್ತು ಮಾಡಿಸಿಲ್ಲ. ದಾವಾ ಅನುಸೂಚಿ ಚೆಕ್ಕುಬಂದಿಯೊಳಗಡೆ ನಾನೇ ಸ್ವಾಧೀನದಲ್ಲಿ ಇದ್ದೇನೆ ಎಂದು ಹೇಳುವುದಕ್ಕೆ ದಾಖಲೆಗಳನ್ನು ಹಾಜರುಪಡಿಸಿರುತ್ತೇನೆ. ಸರ್ವೆ ನಂಬರ್ 73 ಸ್ವತ್ತು ನನಗೆ ಕ್ರಯ ಆದ ನಂತರ 1989 ರಲ್ಲಿ ನನ್ನ ಪತಿಯ ಹೆಸರಿಗೆ ಖಾತೆ ಆಗಿರುತ್ತದೆ. ನನ್ನ ಪತಿಯ ಹೆಸರಿಗೆ ಖಾತೆ ಆಗಿದೆ ಎನ್ನುವುದಕ್ಕೆ ಸಂಬಂಧಪಟ್ಟ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ.

ದಿಃ 11.07.2014 ರಲ್ಲಿ ನನ್ನ ಪತಿ ಮರಣಹೊಂದಿರುತ್ತಾರೆ. ನನ್ನ ಪತಿ ಮರಣ ಹೊಂದಿದ ನಂತರ ನನ್ನ ಹೆಸರಿಗೆ 2014 ರಲ್ಲಿಯೇ ಖಾತೆಯನ್ನು ಮಾಡಿಸಿರುತ್ತೇನೆ. ಆ ಬಗ್ಗೆ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. 1989ರಲ್ಲಿ ಕ್ರಯವಾದ ನಂತರ ನಾವೇ ದಾವಾ ಅನುಸೂಚಿ ಸ್ವತ್ತಿನ ಅನುಭೋಗದಲ್ಲಿ ಇದ್ದೇವೆ ಎಂದು ತೋರಿಸಲು ಹಿಡುವಳಿ ಪತ್ರವನ್ನು ಹಾಜರುಪಡಿಸಲಾಗಿದೆ. ಸದರಿ ಹಿಡುವಳಿ ಪತ್ರವನ್ನು ತಹಶೀಲ್ದಾರರು ಯಾವಾಗ ಕೊಟ್ಟಿರುತ್ತಾರೆ ಎಂದು ನನಗೆ ನೆನಪಿಲ್ಲ. ನಿಪಿ-1 ರಲ್ಲಿ ಸಾವಿತ್ರಮ್ಮರವರ ಹೆಸರಿಗೆ ಯಾವಾಗ ದುರಸ್ತು ಆಗಿರುತ್ತದೆ ಎಂದು ನಮೂದು ಮಾಡಿಸಿಲ್ಲ. ಕ್ರಯಪತ್ರದಲ್ಲಿ

ನಮೂದು ಆಗಿರುವ ಚೆಕ್ಕುಬಂಧಿಗೂ ದುರಸ್ತು ಚೆಕ್ಕುಬಂಧಿಗೂ ವತ್ಯಾಸ ಇದೆ ಎಂದರೆ ನನಗೆ ಗೊತ್ತಿಲ್ಲ. ನಿಪಿ-1 ರಲ್ಲಿ ಸಾವಿತ್ರಮ್ಮರವರಿಗೆ ಯಾವಾಗ ಖಾತೆ ಆಗಿದೆ ಎಂದು ನಮೂದು ಮಾಡಿಸಿರುತ್ತೇನೆ. ಯಾವ ದಿನಾಂಕದಂದು ಖಾತೆಯಾಗಿರುತ್ತದೆ ಎಂದು ನಿಪಿ-1 ರಲ್ಲಿ ನಮೂದು ಮಾಡಿಸಲಾಗಿದೆ ಎಂದು ನನಗೆ ಗೊತ್ತಿಲ್ಲ.

**( ಸಾಕ್ಷಿಯು ಯಾವುದೇ ಪ್ರಶ್ನೆಗಳಿಗೆ ಸರಿಯಾಗಿ ಉತ್ತರ ನೀಡುತ್ತಿಲ್ಲವಾದ್ದರಿಂದ ಮುಂದುವರೆದ ಪಾಟೀ ಸವಾಲಿಗೆ ಸಮಯ ನೀಡಿ ಮುಂದೂಡಲಾಯಿತು).**

**ಮರು ವಿಚಾರಣೆ:- ಇಲ್ಲ.**

(ಬಹಿರಂಗ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೆ.ಸ.ಇ.

ಪ್ರಧಾನ ಸಿವಿಲ್ ಜಡ್ಜ್ & ಜೆ.ಎಂ.ಎಫ್.ಸಿ.,
ಹೊಳೆನರಸೀಪುರ.